ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ ಎರಡನೆಯದಾಗಿ ಪದೇ ಪದೇ ಆರ್ಥಿಕ ದಿಗ್ಬಂದನ ಎಲ್ಲಾ ಕಡೆ ನಡೆಯುತ್ತಿದೆ. ಅದಕ್ಕೆ ನಾನೊಂದು ಸಲಹೆ ಮಾಡಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ನಾನು ಕೊಟ್ಟ ಸಲಹೆ ಏನೆಂದರೆ ಎಲ್ಲೆಲ್ಲಿ ಈ ಜನ ಬೆಗರ್‌ಮುಕಂ ಮಾಡಿ ಕೊಂಡಿದ್ದಾರೋ ಆ ಜಮೀನುಗಳನ್ನು ಆ ಜನಗಳಿಗೆ ಕೊಡಕ್ಕಂಥಾದ್ದು ಮಾಡಿ ಎಂದು. ಅದಕ್ಕೆ ಕಾನೂನಿನ ವಿರೋಧವಿದ್ದರೂ ಕೂಡ ಮಂಜೂರು ಮಾಡಿ ಆ ಸಮಸ್ಯೆಯನ್ನು ಸೆಟಲ್ ಮಾಡಿ ಮತ್ತು ಅವರ ಪಕ್ಕೇಗೆ ಕೆಲಸ ಕೊಡಿ ಎಂದು ಹೇಳಿದ್ದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ ಉತ್ತರ ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಸ್ವಾಮಿ ನಾನು ಮಾನ್ಯ ರಾಮಕೃಷ್ಣ ಹೆಗಡೆಯವರಲ್ಲಿ ಕೇಳಿ ಕೊಳ್ಳುವುದು ಇಷ್ಟೇ ಕಾನೂನು ತಂದು ಇಂಥಾದ್ದನ್ನು ತಡೆಗಟ್ಟಲು ಸಾಧ್ಯವಿಲ್ಲ. ಆ ರೀತಿ ಮಾಡು ತ್ತೇನೆಂದರೂ ಕೂಡ ಅದು ತಪ್ಪು, ನನಗನ್ನಿಸುತ್ತದೆ ಇದು ಕಾನೂನಿನಿಂದ ಆಗುವುದಿಲ್ಲ. ಎಲ್ಲಾ ಪಕ್ಷಗಳು ಒಗ್ಗಟ್ಟಾಗಿ ಈ ಸಮಾಜದಲ್ಲಿರತ್ಕಂಥ ಪಿಡುಗನ್ನು ದೂರ ಮಾಡಲು ಪ್ರಯತ್ನ ಮಾಡಿದರೆ ಆಗ ಅದು ಸ್ವಲ್ಪ ಜರುಗಬಹುದು. ಈ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸ್ಪಷ್ಟ ಉತ್ತರ ಕೊಡಬೇಕು. ಏಕೋ ಅವರು ಸ್ವಲ್ಪ ಹಿಂದೇಟು ಹಾಕುತ್ತಿರುವಂತೆ ಕಾಣುತ್ತದೆ. ಈಗಾಗಲೇ ಸಿ.ಆರ್.ಇ. ಸೆಲ್ ಫೇಲ್ ಆಗಿದೆ. ಈಗ ಮತ್ತೊಂದು ಹೊಸ ಕಾನೂನು ಮಾಡಿದರೆ ಜನರಲ್ಲಿ ಮತ್ತೇ ಅದೇ ಭಾವನೆ ಬರುತ್ತದೆ. ತಾವು ಹಿಂದೇಟು ಹಾಕದೆ ಸ್ಪಷ್ಟ ಉತ್ತರ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.— ನಾನೇನು ಹಿಂದೇಟು ಹಾಕುತ್ತಿಲ್ಲ. ಸ್ಪಷ್ಟವಾಗಿ ಇಷ್ಟೊಂದು ಪಾಜಿಟೀವ್ ಉತ್ತರ ಬೇರೆ ಯಾರು ಕೊಟ್ಟಿರಲಿಕ್ಕಿಲ್ಲ. ಆಮೇಲೆ ಪುಂಡುಗಂದಾಯ ಹಾಕುತ್ತೇವೆಂದು ನಾನು ಸ್ಪಷ್ಟವಾಗಿಯೇ ಹೇಳಿದ್ದೇನೆ. ಕಾಯ್ದೆಯಿಂದ ಸಮಸ್ಯೆ ಬಗೆಹರಿಯುವುದಿಲ್ಲವೆಂದು ತಾವು ಹೇಳಿದ್ದೀರಿ, ಸಾಮಾಜಿಕವಾಗಿ ಸಾಮೂಹಿಕ ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದಿರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ತಾವೇ ಸಮಾಜದಲ್ಲಿ ಮೇಲ್ವರ್ಗದವರಾಗಿದ್ದೀರಿ, ಒಂದು ಚಳುವಳಿ ಪ್ರಾರಂಭ ಮಾಡಿ.

ನಿಯಮ ೩೫೪ರ ಮೇರೆಗೆ

ಮಂಗಳೂರು ಆರ್.ಟಿ.ಓ. ಕಚೇರಿಯಿಂದ ಭ್ರಷ್ಟಾಚಾರವನ್ನು ತೊಲಗಿಸುವುದು

ಶ್ರೀ ಬಿ.ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿರುವ ಆರ್.ಟಿ.ಓ. ಆಫೀಸು ಹಳೆ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಬಂದಿದೆ. ಆದರೆ ಈ ಆಫೀಸಿನ ಭ್ರಷ್ಟಾಚಾರದ ದೂರುಗಳು ಹಿಂದಿನಂತೆಯೇ ಈಗಲೂ ಕೇಳಿ ಬರುತ್ತಿದೆ. ಅಲ್ಲಿನ ಸಿಬ್ಬಂದಿ ವರ್ಗದಲ್ಲಿ ಕೆಲವರು ತುಂಬಾ ಶ್ರೀಮಂತರಾದ ವರದಿಗಳು ಕೇಳಿಸುತ್ತಲೇ ಇದೆ. ಈ ಆಫೀಸಿನಲ್ಲಿ ದಲ್ಲಾಳಿಗಳು ಒಂತಲ್ಲೊಂದು ರೀತಿಯಿಂದ ಗ್ರಾಹಕರನ್ನು ವಂಚಿಸುತ್ತಿದ್ದಾರೆಂಬ ದೂರು ಕೇಳುತ್ತಲೇ ಇದೆ. ಈ ಅನಿಷ್ಟಗಳನ್ನು ನೀಗಿಸಲು ಕೆಲವು ಕಾರ್ಯಕ್ರಮ ರೂಪಿತವಾಗಿದೆಯೆಂದು ಹೇಳಲಾಗುತ್ತಿದೆ. ಆದರೆ ಮಂಗಳೂರು ಆರ್.ಟಿ.ಓ.ದಲ್ಲಿ ಅದು ಕಾರ್ಯಗತವಾಗಿಲ್ಲ. ಈಬಗ್ಗೆ ಹೊಸ ಕ್ರಮಗಳೇನಾದರೂ ಜಾರಿಯಲ್ಲಿದೆಯೇ? ಇಲ್ಲಿನ ಭ್ರಷ್ಟಾಚಾರ ನಿಲ್ಲುವುದು ಪ್ರಾಮುಖ್ಯ ವಿಷಯವಾಗಿದೆ. ಈ ಕುರಿತು ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಚ್. ವಿಶ್ವಾಂತಯ್ಯ.— ನಾನು ಉತ್ತರ ತರಿಸಿಕೊಡುತ್ತೇನೆ.

ಮಾರ್ಗಾನುಕುಂಟೆ ವೈದ್ಯಾಧಿಕಾರಿಗಳು ಕೇಂದ್ರಸ್ಥಾನದಲ್ಲಿ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು.

ಶ್ರೀ ಬಿ. ನಾರಾಯಣಸ್ವಾಮಿ.— ಮಾನ್ಯ ಅಧ್ಯಕ್ಷರೆ, ಬಾಗೇಪಲ್ಲಿ ಕ್ಷೇತ್ರದ ಮಾರಗಾನಕುಂಟೆ ಸಾರ್ವಜನಿಕರ ಕಡೆಯಿಂದ ಹಲವಾರು ದೂರುಗಳು ಬಂದಿರುತ್ತವೆ. ಮಾರಗಾನಕುಂಟೆ ವೈದ್ಯಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿರುವ ಇವರು ಬಾಗೇಪಲ್ಲಿಯಲ್ಲಿ ಸ್ವಂತ ಆಸ್ಪತ್ರೆಯನ್ನು ತೆಗೆದುಕೊಂಡು